PURAVANKARA

Date: **07.04.2026**

To,

The General Manager,	The Manager,
Listing Operations Department of Corporate Services **BSE Limited** P. J. Towers, Dalal Street, Fort, Mumbai- 400 001 **Stock Code: 532891**	Listing Department, **National Stock Exchange of India Limited,** Exchange Plaza, 5th Floor, Plot No. C/1, G Block, Bandra-Kurla Complex, Bandra (E), Mumbai- 400 051 **Stock Code: PURVA**

Dear Sir / Madam,

Sub: Newspaper Publication – Special Window for Transfer and Dematerialisation of Physical Securities and 100 Days Campaign - "Saksham Niveshak" for KYC and related updation and shareholders engagement to prevent transfer of Unpaid/Unclaimed dividends to Investor Education and Protection Fund (IEPF)

We write to inform you that we have enclosed herewith the copy of the extract of the newspaper advertisement on Special Window for Transfer and Dematerialisation of Physical Securities of Puravankara Limited and on 100 Days Campaign - "Saksham Niveshak" for KYC and related updation and shareholders engagement to prevent transfer of Unpaid/Unclaimed dividends to Investor Education and Protection Fund (IEPF), published in the following newspapers on April 07, 2026:

i. "Financial Express" (English Newspaper)
ii. "Vijaya Karnataka" (Kannada Newspaper)

This is for your information and records.

Thanking you,

Yours sincerely,
For Puravankara Limited

SUDIP CHATTERJEE
Digitally signed by SUDIP CHATTERJEE
Date: 2026.04.07 12:43:18 +05'30'

(Sudip Chatterjee)
Company Secretary & Compliance Officer
Membership No.: F11373

TOTAL 1,117 JOB OFFERS, THE HIGHEST BEING ₹1.56 CRORE PER ANNUM

ISB placements: Avg pay rises 11%

MANU KAUSHIK
New Delhi, April 6

THE INDIAN SCHOOL of Business (ISB) on Monday said its flagship Post Graduate Programme (PGP) in Management received 1,117 job offers across its Hyderabad and Mohali campuses.

The average salary for the Class of 2026 stood at ₹37.29 lakh per annum, an 11% increase over the previous cohort, while the highest offer touched ₹1.56 crore per annum. The institute said sectors such as consulting, technology and BFSI emerged as the top recruiters this year. Accenture was the largest recruiter with over 100 offers, followed by Mastercard and EY GDS, each making more than 40 offers.

"The school also saw strong hiring from consulting firms such as McKinsey & Company, BCG, Bain & Company and Deloitte, while the technology segment saw recruiters such as Amazon, Genpact, Google, IBM, InMobi, Razorpay and Uber making offers," the institute said in a statement.

ISB also reported a widening of its recruiter base, with 25 first-time recruiters participating in campus placements this year, including UBS, Reliance Foundation Hospital, NTT Data and Teradata. The number of international offers rose to 30, up from 26 in 2025.

Other prominent recruiters included Avendus Capital, Barclays, Ambit Private, DSP Asset Managers, Jefferies India, Kotak Mahindra Capital, Nomura, ITC, P&G, Tata Consumer Products, L'Oréal, Flipkart, Nykaa, Swiggy and Zomato.

According to ISB, the PGP programme has enabled significant career mobility, with 67% of students moving to a new industry and 69% shifting to a new function.

Madan Pillutla, dean of ISB, advised the graduating cohort to separate signal from noise. He urged graduates to use their education to systematically tackle complex problems rather than deferring difficult choices.

Launched in 2001, the ISB PGP was India's first one-year, full-time residential management programme for experienced professionals.

CAMPUS HIRING

- Consulting, technology and BFSI have emerged as the top recruiters this year
- Accenture was the largest recruiter with over 100 offers, followed by Mastercard and EY GDS



- The number of international offers rose to 30, up from 26 in 2025
- 25 first-time recruiters participated in campus placements this year

Conclude Future Lifestyle insolvency in 3 mths: NCLAT

PRESS TRUST OF INDIA
New Delhi, April 6

THE NATIONAL COMPANY Law Appellate Tribunal has ordered the conclusion of the insolvency proceedings for Future Lifestyle Fashion within three months.

While rejecting an appeal filed by an operational creditor, a two-member bench has asked the Resolution Professional and National Company Law Tribunal (NCLT) to complete the proceedings, preferably within three months.

The appellate insolvency tribunal observed that the Resolution Professional is still in possession of the leased property and can not be released, hence dismissed it.

"However, we request the Resolution Professional/the NCLT to conclude the proceedings as expeditiously as possible, preferably within three months from today," said a two-member National Company Law Appellate Tribunal (NCLAT) bench, comprising Justice Yogesh Khanna and Ajai Das Mehrotra.

Insolvency against Future Lifestyle Fashion (FLFL) was initiated by the Mumbai bench of NCLT on May 4, 2023, over a petition filed by Bank of India.

The Insolvency & Bankruptcy Code (IBC) mandates completing CIRP within 330 days, which includes time taken during litigations. This time limit has already been exhausted.

During the proceedings, the NCLAT was informed that the property, for which an appeal has been filed, is the only premises where the operation of FLFL continues under its brand CENTRAL.

"Furthermore, more than 80% of the Corporate Debtor's (FLFL) business comes from the subject Property," the appellate tribunal noted in its order.

FROM THE FRONT PAGE

FM counts on fiscal space...

"THIS IS THE dividend of a decade of fiscal discipline. This is the strategic value of fiscal prudence that pays dividends across decades." Highlighting recent policy actions, she said the government has been able to cut excise duties on petrol and diesel, extend exemptions on critical petrochemical products, and permit SEZs to operate in the domestic tariff area to ease supply-side pressures.

The country's general government debt-to-GDP ratio, including states, is estimated at around 81%, among the lowest for large economies after Germany, she highlighted. More significantly, India is the only major economy where the International Monetary Fund projects a meaningful decline in this ratio to 75.8% by 2030, even as debt levels in advanced economies such as the United States, China and Germany are expected to worsen, she said.

She also noted that India's external debt-to-GDP ratio remains low at 19.1% as of September 2025, while forex reserves of over $688 billion as of end-March 2026 provide an import cover of about 11 months, offering a strong buffer against external shocks.

The FM said these outcomes are the result of sustained policy choices, often involving difficult trade-offs, rather than incidental gains. She credited stable leadership and consistent policy direction for enabling what she described as a structural transformation in public finance over the past decade.

Sitharaman said the government has shifted the fiscal approach from consumption-led deficits to investment-led consolidation, with a clear emphasis on improving the quality of expenditure. Capex has risen from 1.6% of GDP in 2014-15 to 3.1% in 2026-27, with effective capital expenditure estimated at 4.4% of GDP.

In absolute terms, this translates into an increase from nearly ₹2 lakh crore to ₹12.22 lakh crore, delivering significant multiplier effects for the economy.

She added that reforms in Budget execution, including the adoption of 'just-in-time' fund releases and wider use of the Public Financial Management System (PFMS), have improved efficiency. States have adopted the SNA SPARSH model, helping streamline fund flows and reduce borrowing costs.

Placing the current situation in a global context, Sitharaman said the past year has underscored the importance of fiscal discipline. Trade fragmentation in 2025 disrupted global supply chains and led to downward revisions in growth forecasts, although India's outlook remained relatively resilient.

However, she cautioned that 2026 presents a more complex challenge as the global environment shifts from episodic shocks to what she termed "permanent volatility." The intensifying West Asia conflict threatens global energy flows and is contributing to the emergence of a more fragmented, multipolar world order.

Invoking the concept of VUCA—volatility, uncertainty, complexity and ambiguity—she said the term has gained renewed relevance in recent years. With global public debt estimated at about $106 trillion, or over 95% of global GDP, many advanced economies now face constrained policy space at a time when flexibility is most needed.

Fuel pumps feel the heat as OMCs seek advances

IN A REPRESENTATION to the government, dealer bodies warned that the rollback of earlier credit systems is beginning to affect supply dynamics. They said recent changes have "adversely affected the supply chain and are likely to cause product shortages at retail outlets."

The communication highlighted the importance of earlier systems in sustaining daily operations. "This facility enabled dealers to deposit cash collected during the day into their bank accounts and then remit the payment to the OMCs," it said, referring to the day-end credit system that had long underpinned fuel distribution.

The withdrawal of such mechanisms has altered the operating cycle. "Dealers are now compelled to make advance payments before supplies are released, which has severely disrupted the supply chain and pushed the entire dealer network to the brink of low stocks," the letter noted.

Until recently, OMCs offered a layered credit framework -- including day-end settlement, short-term revolving credit of three to five days and bank-backed dealer financing -- that helped dealers maintain inventory buffers and extend limited credit to customers.

"The recent shift by all three state-run OMCs to seek advance payments has created significant pressure on dealers' working capital. Until recently, we operated with short-term credit lines stretching a few days, which helped maintain smooth operations and stock levels," said Uday Lodh, president of the Consortium of Indian Petroleum Dealers (CIPD), which represents about 30,000 outlets.

"The sudden withdrawal of these facilities is disrupting cash flows on the ground, especially for smaller dealers and could impact fuel availability if not addressed urgently," he added.

Dealers say even the limited flexibility that remains is proving inadequate. "Dealers are currently being extended only

end-of-day credit by companies like HPCL and BPCL, requiring full payment settlement within the same day. On bank holidays, dealers have to send the payment on the next bank working day," said K P Murali, president of the Tamil Nadu Petroleum Dealers Association.

The stress is particularly acute in rural and semi-urban markets. "The advance payment requirement is particularly challenging for smaller pumps... where issues such as server downtime and limited banking infrastructure make timely transactions difficult," Reddy said.

He added that operational disruptions are already visible. "During recent holidays like Good Friday, when banks were closed, this system disrupted operations and, in some cases, even led to stock-outs at fuel stations."

Dealer groups also flagged that outlets which had built their business models around extending limited credit to customers are now facing "serious difficulties in recovering their dues, leading to an acute cash crunch."

The timing of the squeeze is critical. The ongoing West Asia conflict has tightened global supply conditions and increased volatility in oil markets, amplifying pressure across the downstream ecosystem.

Queries sent to the petroleum ministry and OMCs, including IOC, BPCL and HPCL, remained unanswered till the time of going to press.

The government, however, has maintained that supply conditions remain stable. "All refineries are operating at high capacity, with adequate crude inventories in place. The country is also maintaining sufficient stocks of petrol and diesel. All retail outlets are operating normally across the country," the ministry of petroleum and natural gas said.

It also noted that instances of panic buying have been observed in certain areas but reiterated that adequate stocks are available nationwide.

At the same time, financial pressure on OMCs remains elevated. According to the government, companies are incurring under-recoveries of ₹24.40 per litre on petrol and about ₹104.99 per litre on diesel, reflecting the gap between global prices and retail rates. The Centre has reduced excise duty by ₹10 on both fuels to ease pressure and avoid price hikes.

No SC relief for Vedanta

DURING THE HEARING, Vedanta argued that allowing the plan to be implemented could lead to irreversible consequences, including disbursement of funds to creditors and changes in the company's structure, potentially rendering its appeal ineffective. The company said its bid offered higher value, and questioned the transparency of the process.

The committee of creditors (CoC) defended the process, stating that the difference between the competing bids was limited and that the resolution had been conducted in line with the prescribed framework. It also argued that implementation would take time and that adequate safeguards were already in place, with the process being subject to the outcome of Vedanta's appeal. The dispute stems from insolvency proceedings at JAL, which was admitted for resolution in June 2024 following claims exceeding ₹57,000 crore. The process saw strong interest, with multiple bidders participating, before Adani Enterprises and Vedanta emerged as leading contenders.

Lenders eventually approved of Adani Enterprises' resolution plan with a 93.81% voting share, citing stronger execution certainty and upfront recovery. The NCLT cleared the plan in March this year.

Vedanta has challenged both the validity of the resolution plan and its approval, arguing that its own bid of ₹16,726 crore was higher and better aligned with value maximisation under the Insolvency and Bankruptcy Code. Vedanta also contended that it was initially declared as the highest bidder during the process, but the final outcome was altered, and that its revised offer was not considered. Lenders, however, have maintained that the evaluation was based on multiple parameters and that Vedanta's revised bid was submitted after the close of the process, making it ineligible for consideration.

Adani Enterprises was represented by senior advocates Mukul Rohatgi and Ritin Rai along with a team from Karanjawala & Co. The resolution professional was represented by advocates Abhishek Manu Singhvi and Arun Kathpalia along with a team from Shardul Amarchand Mangaldas. Senior advocates Kapil Sibal, VV Giri and Abhijeet Sinha, along with advocate Deep Roy, appeared for Vedanta. The CoC was represented by senior advocates Niranjan Reddy and Biswajeet Dubey.

ಪ್ರಶ್ನೆ: ಕೆಲಸದ ವಿಚಾರದಲ್ಲಿ ಅಂತಿಮ ಸುತ್ತಿನವರೆಗೆ ನಿರಾಯಾಸವಾಗಿ ಹೋಗುತ್ತೇನೆ. ಸಂದರ್ಶನದಲ್ಲಿ ಸೋಲುತ್ತೇನೆ. ಆಯ್ಕೆಯಾಗಲು ಏನು ಮಾಡಬೇಕು?

ಜನ್ಮ ದಿನಾಂಕ: 04.10.2003 **ನಕ್ಷತ್ರ:** ಉತ್ತರಾಷಾಢ

ಪರಿಹಾರ: ನಿಮ್ಮ ನಿರೀಕ್ಷೆ ಹುಸಿಯಾಗುವುದಿಲ್ಲ. ಸಂದರ್ಶನದಲ್ಲಿ ಏನು ಹೇಳಬೇಕು, ಹೇಗೆ ಉತ್ತರಿಸಬೇಕು ಎನ್ನುವುದನ್ನು ಅನುಭವಿಗಳಿಂದ ತಿಳಿದುಕೊಂಡು ಸಿದ್ಧತೆ ನಡೆಸಿ. ನಿಮ್ಮ ಜೀವನದಲ್ಲಿ ಒಳ್ಳೆಯ ಅಧ್ಯಾಯ ಆರಂಭವಾಗಿದೆ. ಸುಖ, ಧೈರ್ಯ, ಯಶಸ್ಸು, ಆರೋಗ್ಯ, ಮಾನಸಿಕ ನೆಮ್ಮದಿಗೆ ಯಾವುದೇ ಕೊರತೆ ಉಂಟಾಗುವುದಿಲ್ಲ. ಶನಿ ಸಂಚಾರ ಮುಗಿಯುವ ಈ ಸಮಯದಲ್ಲಿ ಪಾರ್ವತಿ-ಸಾಂಬಸದಾಶಿವರನ್ನು ಭಕ್ತಿಯಿಂದ ಪೂಜಿಸಿ. ಶಿವ ಅಷ್ಟೋತ್ತರ, ಶನಿ ಪಿಪ್ಪಲಾ ಸ್ತೋತ್ರ ಪಾರಾಯಣ ಮಾಡಿ.

ವಾಟ್ಸ್ಆ್ಯಪ್: 6366422240

ಪಂಚಾಂಗ 07-04-2026

ಪರಾಭವ ನಾಮ ಸಂವತ್ಸರ
ಆಯನ: ಉತ್ತರಾಯಣ.
ಋತು: ವಸಂತ. **ಮಾಸ:** ಚೈತ್ರ.
ಪಕ್ಷ: ಕೃಷ್ಣ. **ಮಳೆ ನಕ್ಷತ್ರ:** ರೇವತಿ.
ನಿತ್ಯನಕ್ಷತ್ರ: ಜ್ಯೇಷ್ಠಾ.
ತಿಥಿ: ಪಂಚಮಿ. **ಯೋಗ:** ವ್ಯತೀಪಾತ. **ಕರಣ:** ತೈತಿಲ.
ವಾರ: ಮಂಗಳವಾರ.

ರಾಹು ಕಾಲ: ಮ. 3.00 - 4.30
ಗುಳಿಕ ಕಾಲ: ಮ. 12.00-1.30
ಯಮಗಂಡ ಕಾಲ: ಬೆ. 9.00-10.30
ಸೂರ್ಯ ಉದಯ: ಬೆ. 6.13
ಸೂರ್ಯ ಅಸ್ತ: ಸಂ. 6.30

'ಬಿ' ರಿಪೋರ್ಟ್ ಪ್ರಶ್ನಿಸಿ ಇ.ಡಿ ಮೇಲ್ಮನವಿ

ವರದಿ ಅಂಗೀಕರಿಸಿದ್ದ ಜನಪ್ರತಿನಿಧಿಗಳ ವಿಶೇಷ ಕೋರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಮತ್ತಿತರರು ಆರೋಪ ಎದುರಿಸುತ್ತಿದ್ದ ಮುಡಾ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ 'ಬಿ' ರಿಪೋರ್ಟ್ ಅಂಗೀಕಾರ ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಮೇಲ್ಮನವಿ ಸಲ್ಲಿಸಿದೆ. ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಆದೇಶ ಪ್ರಶ್ನಿಸಿ ಇ.ಡಿ ಮೇಲ್ಮನವಿ ಸಲ್ಲಿಸಿದ್ದು, ಅದಿನ್ನೂ ವಿಚಾರಣೆಗೆ ಬರಬೇಕಿದೆ.

ಮುಡಾ ಪ್ರಕರಣ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತವರ ಕುಟುಂಬ ಸದಸ್ಯರ ವಿರುದ್ಧ ಮೈಸೂರಿನ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸಲ್ಲಿಸಿದ 'ಬಿ' ರಿಪೋರ್ಟ್ ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಕ್ರಮ ಪ್ರಶ್ನಿಸಿ ಪ್ರಕರಣದ ಖಾಸಗಿ ದೂರುದಾರ ಸ್ನೇಹಮಯಿ ಕೃಷ್ಣ ಈಗಾಗಲೇ ಮೇಲ್ಮನವಿ ಸಲ್ಲಿಸಿದ್ದಾರೆ. ಆ ಅರ್ಜಿ ಇನ್ನೂ ವಿಚಾರಣೆಗೆ ಬರಬೇಕಿದೆ.

ಪ್ರಕರಣದ ತನಿಖೆ ನಡೆಸಿದ್ದ ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ 2025ರ ಫೆ.12ರಂದು ಬೆಂಗಳೂರಿನ 82ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ (ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ)ಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಅದನ್ನು ಅಂಗೀಕರಿಸಿ ವಿಶೇಷ ನ್ಯಾಯಾಲಯ 2026ರ ಜ.28ರಂದು ಆದೇಶ ಹೊರಡಿಸಿದೆ. ಹಾಗಾಗಿ, ಲೋಕಾಯುಕ್ತ ಎಸ್ಪಿ ಸಲ್ಲಿಸಿರುವ 'ಬಿ' ರಿಪೋರ್ಟ್ ಪಡೆದು ಪರಿಶೀಲಿಸಬೇಕು. 'ಬಿ' ರಿಪೋರ್ಟ್ ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು. ಅಲ್ಲದೆ, ಸ್ವತಂತ್ರ ತನಿಖಾ ಸಂಸ್ಥೆಗೆ ಪ್ರಕರಣದ ತನಿಖೆ ವರ್ಗಾಯಿಸಬೇಕು. ತನಿಖೆ ನಡೆಸಿ ಹೊಸದಾಗಿ ವರದಿ ಸಲ್ಲಿಸಲು ಸ್ವತಂತ್ರ ತನಿಖಾ ಸಂಸ್ಥೆಗೆ ನಿರ್ದೇಶಿಸಬೇಕು ಎಂದು ಕೋರಿದ್ದಾರೆ.

ಮೇಲ್ಮನವಿಯಲ್ಲಿ ಮೈಸೂರು ಜಿಲ್ಲಾ ಲೋಕಾಯುಕ್ತದ ಪೊಲೀಸ್ ಅಧೀಕ್ಷಕರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ. ಪಾರ್ವತಿ, ಭಾವಮೈದ ಮಲ್ಲಿಕಾರ್ಜುನ ಸ್ವಾಮಿ, ವಿವಾದಿತ ಜಮೀನಿನ ಮೂಲ ಮಾಲೀಕ ಜೆ.ದೇವರಾಜು, ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಮತ್ತು ಜಾರಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅಂಚೆ ಮತ ಮರುಪರಿಶೀಲನೆಗೆ ಆದೇಶ

■ ಶಾಸಕ ಟಿ.ಡಿ.ರಾಜೇಗೌಡಗೆ ತಾತ್ಕಾಲಿಕ ರಿಲೀಫ್
■ ಆದೇಶಕ್ಕೆ ಎರಡು ವಾರ ಮಧ್ಯಂತರ ತಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ ಮತದಾನವಾದ ಒಟ್ಟು ಅಂಚೆ ಮತದಲ್ಲಿ ತಿರಸ್ಕೃತಗೊಂಡಿರುವ 279 ಮತಗಳನ್ನು ಮರುಪರಿಶೀಲಿಸಿ ಹೊಸದಾಗಿ ಫಲಿತಾಂಶ ಪ್ರಕಟ ಮಾಡುವಂತೆ ಹೈಕೋರ್ಟ್, ಕೇಂದ್ರ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ.

ಶೃಂಗೇರಿ ವಿಧಾನಸಭಾ ಚುನಾವಣೆ

ಆದರೆ, ಹಾಲಿ ಶಾಸಕ ಟಿ.ಡಿ.ರಾಜೇಗೌಡ ಅವರ ವಕೀಲರು ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಸಮಯಾವಕಾಶ ಕೋರಿದ್ದರಿಂದ ನ್ಯಾಯಾಲಯ ಆ ಆದೇಶಕ್ಕೆ ಎರಡು ವಾರಗಳ ಕಾಲ ಮಧ್ಯಂತರ ತಡೆ ನೀಡಿದೆ. ಹಾಗಾಗಿ, ರಾಜೇಗೌಡರಿಗೆ ಸದ್ಯಕ್ಕೆ ರಿಲೀಫ್ ಸಿಕ್ಕಂತಾಗಿದೆ.

ರಾಜೇಗೌಡ ಆಯ್ಕೆ ಅಸಿಂಧುವೆಂದು ಘೋಷಣೆ ಮಾಡುವಂತೆ ಕೋರಿ ಪರಾಜಿತ ಅಭ್ಯರ್ಥಿ ಡಿ.ಎನ್.ಜೀವರಾಜ್ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, ''ಮುಂದಿನ ಎರಡು ವಾರಗಳಲ್ಲಿ ತಿರಸ್ಕೃತ 279 ಅಂಚೆ ಮತಗಳನ್ನು ಮರುಪರಿಶೀಲನೆ ಮಾಡಬೇಕು. ಈ ಸಂದರ್ಭದಲ್ಲಿ ಚುನಾವಣಾಧಿಕಾರಿಗಳು ಕೈಪಿಡಿಯ ಮಾರ್ಗಸೂಚಿ -2023ರ 15(14)(7) ಅನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ತಿರಸ್ಕೃತ ಮತಗಳ ಮರು ಪರಿಶೀಲನೆ ಸಂದರ್ಭದಲ್ಲಿ ಅರ್ಜಿದಾರರು ಮತ್ತು ಪ್ರತಿವಾದಿ ರಾಜೇಗೌಡ ಅವರಿಗೆ ಹಂಚಿಕೆಯಾಗಿರುವ ಮತಗಳಲ್ಲಿ ಯಾವುದೇ ಗಣನೀಯ ಲೋಪ ಕಂಡು ಬಂದಲ್ಲಿ ಎಲ್ಲ ಅಂಚೆ ಮತಗಳನ್ನು ಮರು ಎಣಿಕೆ ಮಾಡಿ ಹೊಸದಾಗಿ ಫಲಿತಾಂಶ ಪ್ರಕಟಿಸಬೇಕು,'' ಎಂದು ಆದೇಶಿಸಿದೆ.

ಅಲ್ಲದೆ, ಆದೇಶದ ಪ್ರತಿಯನ್ನು ಕೇಂದ್ರ ಚುನಾವಣಾ ಆಯೋಗದ ಕಾರ್ಯದರ್ಶಿ, ಜಿಲ್ಲಾ ಮುಖ್ಯ ಚುನಾವಣಾಧಿಕಾರಿ ಮತ್ತು ಶೃಂಗೇರಿಯ ಚುನಾವಣಾಧಿಕಾರಿಗಳಿಗೆ ಇ-ಮೇಲ್ ಇಲ್ಲವೇ ಸ್ಪೀಡ್ ಪೋಸ್ಟ್ ಮೂಲಕ ರವಾನಿಸಬೇಕು ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ಸೂಚನೆ ನೀಡಿದೆ.

ಮುಕ್ತ ವಿವಿ ಕುಲಸಚಿವೆ ನೇಮಕ ವಾಪಸು

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವೆ ಹುದ್ದೆಗೆ ಕೆಎಎಸ್ ಅಧಿಕಾರಿ ಎಸ್.ಕುಸುಮಾ ಕುಮಾರಿ ಅವರನ್ನು ನೇಮಕಗೊಳಿಸಿದ್ದ ಸರಕಾರ, ಎರಡೇ ದಿನದಲ್ಲಿ ಈ ಆದೇಶವನ್ನು ಹಿಂಪಡೆದು ಅಚ್ಚರಿ ಮೂಡಿಸಿದೆ.

ವಿವಿಯ ಈ ಹಿಂದಿನ ಕುಲಸಚಿವರ ವಿರುದ್ಧ ಭ್ರಷ್ಟಾಚಾರ ಆರೋಪ ಕೇಳಿ ಬಂದ ನಂತರ ನವೀನ್ ಕುಮಾರ್ ಅವರನ್ನು ಏಳು ತಿಂಗಳ ಹಿಂದೆ ನೇಮಕ ಮಾಡಲಾಗಿತ್ತು. ಅಲ್ಲದೆ, ರಾಜ್ಯಪಾಲರು ತನಿಖೆಗೆ ನ್ಯಾಯಮೂರ್ತಿ ಪಾಟೀಲ ಅವರ ನೇತೃತ್ವದ ಸಮಿತಿ ರಚಿಸಿದ್ದರು. ಕಮಿಟಿ ವಿಚಾರಣೆ ನಡೆಸುತ್ತಿರುವಾಗಲೇ ನವೀನ್‌ಕುಮಾರ್ ಅವರನ್ನು ಶನಿವಾರ ವರ್ಗ ಮಾಡಲಾಗಿತ್ತು. ಅವರ ಜಾಗಕ್ಕೆ ಕುಸುಮಾ ಕುಮಾರಿಯನ್ನು ನೇಮಿಸಲಾಗಿತ್ತು. ಒಂದು ತಿಂಗಳಿನಿಂದ ರಾಜ್ಯ ಸರಕಾರ ಹಾಗೂ ಕೆಎಸ್ಒಯು ಕುಲಪತಿ ಪ್ರೊ.ಶರಣಪ್ಪ ಹಲಸೆ ನಡುವೆ ಮುಸುಕಿನ ಗುದ್ದಾಟ ಏರ್ಪಟ್ಟಿದ್ದು, ಸರಕಾರದ ಈ ದಿಢೀರ್ ಯು-ಟರ್ನ್ ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ನೇಮಕಾತಿಗೆ ಆಗ್ರಹಿಸಿ ನಾಳೆಯಿಂದ ಅನಿರ್ದಿಷ್ಟಾವಧಿ ಧರಣಿ

ಧಾರವಾಡ: ಕೆಪಿಎಸ್‌ಸಿ ಅಕ್ರಮಗಳ ಕುರಿತು ಸಿಬಿಐ ತನಿಖೆ ಆಗಬೇಕು. ಸರಕಾರದ ವಿವಿಧ ಇಲಾಖೆಗಳ ಖಾಲಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕೆಂದು ಒತ್ತಾಯಿಸಿ ಏ.8ರಂದು ಬೆಳಗ್ಗೆ 10ರಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಿಯುತವಾಗಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾಂತಕುಮಾರ ತಿಳಿಸಿದ್ದಾರೆ.

ಬೆಳಗಿನ ವೇಳೆ ಜನಗಣತಿ ತರಬೇತಿ ನೀಡಲು ಶಿಕ್ಷಕರ ಸಂಘ ಮನವಿ

ಬೆಂಗಳೂರು: ಏ.7ರಿಂದ ರಾಜ್ಯದ ಎಲ್ಲಾ ಡಯಟ್ ಹಂತದಲ್ಲಿ ಜನಗಣತಿ ಕುರಿತು ತರಬೇತಿಗಳು ಆರಂಭವಾಗುತ್ತಿದ್ದು, ಬೆಳಗಿನ ಅವಧಿಯಲ್ಲಿ ಆಯೋಜಿಸುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮನವಿ ಮಾಡಿದೆ. ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಬೆಳಗ್ಗೆ 8ರಿಂದ ಮಧ್ಯಾಹ್ನ 1.30 ರವರೆಗೆ ತರಬೇತಿಗೆ ಸಮಯ ನಿಗದಿಪಡಿಸುವಂತೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗೆ ಶಿಕ್ಷಕರ ಸಂಘ ಮನವಿ ಸಲ್ಲಿಸಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸರಕಾರಿ ಕಚೇರಿಗಳ ಅವಧಿಯನ್ನು ಈಗಾಗಲೇ ಬದಲಾವಣೆ ಮಾಡಲಾಗಿದೆ. ಅದೇ ಮಾದರಿಯಲ್ಲಿ ತರಬೇತಿ ಅವಧಿ ನಿಗದಿ ಮಾಡುವ ಮೂಲಕ ಶಿಕ್ಷಕರಿಗೆ ಅನುಕೂಲವಾಗುವಂತೆ ಕ್ರಮ ವಹಿಸಬೇಕು ಎಂದು ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಒತ್ತಾಯಿಸಿದ್ದಾರೆ.

ಡಿಡಿಪಿಐ ಕಚೇರಿ ಡಿ ಗ್ರೂಪ್ ನೌಕರ ಅಸ್ವಸ್ಥ ಪ್ರಕರಣ

ಕ್ಷಮೆಯಾಚಿಸಿದರೆ ಸಂಬಳ ಬಿಡುಗಡೆ?

ಹೊಸಪೇಟೆ (ವಿಜಯನಗರ): ಪಟ್ಟಣದ ಡಿಡಿಪಿಐ ಕಚೇರಿಯ ಡಿ ಗ್ರೂಪ್ ನೌಕರ ಎಸ್.ಎಂ.ನಾಗರಾಜ ಅಸ್ವಸ್ಥರಾಗಿ ಕುಸಿದು ಬಿದ್ದಿದ್ದರೂ ಮಾನವೀಯತೆ ಮರೆತ ಘಟನೆಯ ಕುರಿತು 'ವಿಜಯ ಕರ್ನಾಟಕ'ದಲ್ಲಿ ವರದಿ ಪ್ರಕಟವಾದ ಬಳಿಕ ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ ಅವರು ಮತ್ತೊಂದು ಎಡವಟ್ಟು ಮಾಡಿದ್ದಾರೆ.

ವಿಕ followup

ಗೈರುಹಾಜರಾದ ಅವಧಿಯ ವೇತನ ಸಂಬಂಧ ಶಾಲೆಯ ಮುಖ್ಯೋಪಾಧ್ಯಾಯರು ಪತ್ರ ಬರೆದ ಬಳಿಕ ಪರಿಶೀಲಿಸಿ ವೇತನದ ಆದೇಶ ಮಾಡಲಾಗುವುದು. ಕಚೇರಿಗೆ ಬಂದು ಘಟನೆಯ ಬಗ್ಗೆ ಮೌಖಿಕವಾಗಿ ಕ್ಷಮೆ ಕೇಳಿದರು. ಅದನ್ನೇ ಬರೆದುಕೊಡಲು ಹೇಳಿದೆ. ಒತ್ತಾಯ ಮಾಡಿಲ್ಲ. ಇಲಾಖಾ ತನಿಖೆಯ ವರದಿಯೂ ಬಂದಿದೆ. ಅದನ್ನು ನೋಡಿ ಕ್ರಮ ಕೈಗೊಳ್ಳಲಾಗುವುದು.

-ವೆಂಕಟೇಶ್ ರಾಮಚಂದ್ರಪ್ಪ ಡಿಡಿಪಿಐ, ವಿಜಯನಗರ

ಪತ್ರಕ್ಕೆ ಸಹಿ ಹಾಕಲು ಒತ್ತಡ

''ಅಂದು ಕಚೇರಿಯಲ್ಲಿ ಎಸ್.ಎಂ.ನಾಗರಾಜ ಅಸ್ವಸ್ಥರಾಗಿ ಮೂರ್ಛೆ ಹೋಗಿ ಬಿದ್ದಿಲ್ಲ, ಮಾಧ್ಯಮದವರನ್ನು ನಾವೇ ಕರೆತಂದಿದ್ದೆವು. ನಮಗೆ ಮಾಹಿತಿ ಗೊತ್ತಿಲ್ಲದೇ ಪೂರ್ವಗ್ರಹಪೀಡಿತರಾಗಿ ಹೇಳಿಕೆ ನೀಡಿದ್ದೇವೆ ಎಂದು ಬರೆದ ತಪ್ಪೊಪ್ಪಿಗೆ ಪತ್ರಕ್ಕೆ ಸಹಿ ಮಾಡಿಕೊಡುವಂತೆ ಡಿಡಿಪಿಐ ಹೇಳಿದರು. ಆದರೆ, ನಾವು ಅದಕ್ಕೊಪ್ಪದೆ ವಾಪಸ್ ಬಂದಿದ್ದೇವೆ,'' ಎಂದು ಎಸ್.ಎಂ.ಸುಧಾಕರಸ್ವಾಮಿ ಹೇಳಿದ್ದಾರೆ.

ನೌಕರನ ಸಹೋದರ ಎಸ್.ಎಂ. ಸುಧಾಕರಸ್ವಾಮಿ ಅವರಿಗೆ ಏ.5ರಂದು ಡಿಡಿಪಿಐ ಖುದ್ದು ಕರೆ ಮಾಡಿ, ''ಏ.4ರಂದು ಕಚೇರಿಗೆ ಬಂದಿದ್ದ ಮೂವರೂ ಬನ್ನಿ. ಮೂರು ತಿಂಗಳ ವೇತನಕ್ಕೆ ಆದೇಶ ಮಾಡುವೆ,'' ಎಂದು ನಂಬಿಸಿ ಸೋಮವಾರ ಕಚೇರಿಗೆ ಕರೆಯಿಸಿಕೊಂಡಿದ್ದರು. ಕಚೇರಿಯ ಬಾಗಿಲಲ್ಲಿ ಎಸ್.ಎಂ.ನಾಗರಾಜ ಅನಾಥವಾಗಿ ಮಲಗಿದ್ದ ಘಟನೆಯ ಬಗ್ಗೆ ತಪ್ಪೊಪ್ಪಿಗೆ ಹೇಳಿಕೆ ಬರೆದುಕೊಡುವಂತೆ ಒತ್ತಾಯಿಸಿದ್ದಾರೆ ಎಂಬುದು ಬಹಿರಂಗವಾಗಿದೆ.

ಆದೇಶ ಕೊಡದೇ ವಾಪಸ್ ಕಳಿಸಿದರು: ''ಮುಚ್ಚಳಿಕೆ ಪತ್ರವನ್ನು ಅವರೇ ಬರೆದುಕೊಂಡು ಸಹಿಮಾಡಲು ಹೇಳಿದರು. ನಾವು ಸಹಿಮಾಡಲು ಒಪ್ಪದಿದ್ದಾಗ ವೇತನ ಬಿಡುಗಡೆಯ ಆದೇಶವನ್ನೂ ಕೊಡದೇ ವಾಪಸ್ ಕಳಿಸಿದರು. ನಮ್ಮ ಅಣ್ಣನನ್ನು ಚಿತ್ರದುರ್ಗದ ಜಿಲ್ಲಾಸ್ಪತ್ರೆಯಲ್ಲಿ ದಾಖಲು ಮಾಡಲಾಗಿದೆ. ಗ್ಯಾಂಗ್ರೀನ್ ಆಪರೇಷನ್ ಆಗಿದೆ. ಅವರ ಉದ್ದೇಶ ಮುಚ್ಚಳಿಕೆ ಪತ್ರಕ್ಕೆ ಸಹಿ ಮಾಡಿಸಿಕೊಳ್ಳುವುದಾಗಿತ್ತು,'' ಎಂದು ಎಸ್.ಎಂ.ಸುಧಾಕರಸ್ವಾಮಿ ಬೇಸರ ವ್ಯಕ್ತಪಡಿಸಿದರು.

''ಶಾಲೆಯ ಮುಖ್ಯೋಪಾಧ್ಯಾಯರಿಗೆ ಪತ್ರ ಕೊಟ್ಟು, ಅವರು ಕೊಡುವ ಪತ್ರ ತೆಗೆದುಕೊಂಡು ಬಂದ ಮೇಲೆ ನಾನು ಸಂಬಳದ ಆದೇಶ ಮಾಡುತ್ತೇನೆ ಎಂದು ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ ಹೇಳಿದ್ದಾರೆ,'' ಎಂದು ತಿಳಿಸಿದರು.

ಹಾವೇರಿಯಲ್ಲಿ ಸೋಮವಾರ ನಡೆದ ಹಾವೇರಿ ವಿವಿಯ ಪ್ರಥಮ ಘಟಿಕೋತ್ಸವದಲ್ಲಿ ಹುಕ್ಕೇರಿ ಮಠದ ಸದಾಶಿವ ಸ್ವಾಮೀಜಿ ಹಾಗೂ ಸಾಹಿತಿ ಸತೀಶ ಕುಲಕರ್ಣಿ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. 7 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 11 ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಒಟ್ಟು 1,063 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ನಟಿ ರಶ್ಮಿಕಾಗೆ ತವರು ಮನೆ ಉಡುಗೊರೆ

ವಿರಾಜಪೇಟೆ (ಕೊಡಗು): ಬಹುಭಾಷಾ ಚಲನಚಿತ್ರ ನಟಿ, ಕೊಡಗು ಮೂಲದ ರಶ್ಮಿಕಾ ಮಂದಣ್ಣ ಅವರಿಗೆ ತಂದೆ ಮಂದಣ್ಣ ಅವರು ವಾಸದ ಮನೆಯನ್ನು ಮದುವೆ ಉಡುಗೊರೆಯಾಗಿ ನೀಡಿದ್ದಾರೆ.

ವಿರಾಜಪೇಟೆ ಚೆಂಬೆಬೆಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಕ್ಲೂರು ಗ್ರಾಮದ ಮುಂಡಚಾಡಿರ ಮದನ್ ಮಂದಣ್ಣ ಮತ್ತು ಅವರ ಪತ್ನಿ ಸುಮನ್ ಮಂದಣ್ಣ ಅವರ ಹೆಸರಿನಲ್ಲಿದ್ದ ಐಷಾರಾಮಿ ಮನೆಯನ್ನು ವಿರಾಜಪೇಟೆ ಉಪ ನೋಂದಣಿ ಕಚೇರಿಯಲ್ಲಿ ರಶ್ಮಿಕಾ ಮಂದಣ್ಣ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಟ್ಟರು. ಇತ್ತೀಚೆಗೆ ರಶ್ಮಿಕಾ ಮಂದಣ್ಣ ಅವರು ತೆಲುಗು ಚಿತ್ರನಟ ವಿಜಯ್ ದೇವರಕೊಂಡ ಅವರನ್ನು ವಿವಾಹವಾಗಿದ್ದಾರೆ.

ಕೊಡಗು ಜಿಲ್ಲೆಯ ಪಾಡಿ ಇಗ್ಗುತಪ್ಪ ದೇವಾಲಯಕ್ಕೆ ರಶ್ಮಿಕಾ ಮಂದಣ್ಣ, ವಿಜಯ್ ದೇವರಕೊಂಡ ದಂಪತಿ ಸೋಮವಾರ ಭೇಟಿ ನೀಡಿದ್ದರು.

2 ಆಸ್ಪತ್ರೆಗಳಿಗೆ 1 ವರ್ಷ ರೆಫರಲ್ ವಿನಾಯಿತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸರಕಾರಿ ಆಸ್ಪತ್ರೆಗಳ ಶಿಫಾರಸಿಲ್ಲದೆ ನೇರವಾಗಿ ಬರುವ ಬಡ ರೋಗಿಗಳಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ (ಎಬಿಎಆರ್‌ಕೆ) ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ಚಿಕ್ಕಬಳ್ಳಾಪುರದ ಶ್ರೀ ಸತ್ಯಸಾಯಿ ಸರಳ ಮೆಮೋರಿಯಲ್ ಆಸ್ಪತ್ರೆ ಹಾಗೂ ವಿಜಯಪುರದ ಬಿ.ಎಂ. ಪಾಟೀಲ್ ವೈದ್ಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ರೆಫರಲ್ ವಿನಾಯಿತಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿದೆ.

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸಾ ವಿಧಾನ (2 ಬಿ) ಹಾಗೂ ತೃತೀಯ ಹಂತದ ಆರೋಗ್ಯ ರಕ್ಷಣೆ (3 ಎ) ಚಿಕಿತ್ಸಾ ವಿಧಾನಗಳಿಗೆ ಶಿಫಾರಸಿಲ್ಲದೆ ಬರುವವರಿಗೆ ಸರಕಾರ ನಿಗದಿಪಡಿಸಿರುವ ದರದಲ್ಲೇ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ.

ಮೂಳೆ ಮುರಿತ, ಸಾಮಾನ್ಯ ಶಸ್ತ್ರಚಿಕಿತ್ಸೆ ಹಾಗೂ ಮಾರಣಾಂತಿಕ ಕಾಯಿಲೆಗಳಾದ ಹೃದಯರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ಕಾಯಿಲೆ, ನವಜಾತ ಶಿಶುಗಳ ಕಾಯಿಲೆ ಸೇರಿ ಇತರೆ ಕಾಯಿಲೆಗೆ ಇಲ್ಲಿ ಸರಕಾರಿ ಆಸ್ಪತ್ರೆಯ ರೆಫರಲ್ ಇಲ್ಲದೆ ಚಿಕಿತ್ಸೆ ಪಡೆಯಲು ಬರುವ ಬಡವರಿಗೆ ನೆರವಾಗಲಿದೆ. ಅಲ್ಲದೆ, 2 ಎ, 3 ಬಿ ಚಿಕಿತ್ಸಾ ವಿಧಾನಗಳ ಹಾಗೂ 4 ಎ (ತುರ್ತು ವೈದ್ಯಕೀಯ ಪರಿಸ್ಥಿತಿ) ಪೈಕಿ ಯಾವ ಚಿಕಿತ್ಸಾ ವಿಧಾನದ ಪಾವತಿ ದರ ಕಡಿಮೆ ಇರುತ್ತದೋ ಅಷ್ಟನ್ನೇ ಸರಕಾರದಿಂದ ಪಾವತಿಸಲಾಗುವುದು. ಜತೆಗೆ, ಒಂದು ವರ್ಷದ ಅವಧಿ ಬಳಿಕ ಈ ಪ್ರಾಯೋಗಿಕ ಯೋಜನೆಯ ಸಾಧಕ-ಬಾಧಕ ವರದಿ ಪಡೆದು ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ಇಲಾಖೆ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಶರಣ್ಯ ಪತ್ತೆ ಮಾಡಿದ ತಂಡಕ್ಕೆ ಅಭಿನಂದನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕೊಡಗಿನ ತಡಿಯಂಡಮೋಳ್ ಅರಣ್ಯದಲ್ಲಿ ಚಾರಣ ಮಾಡುವಾಗ ನಾಪತ್ತೆಯಾಗಿದ್ದ ಕೇರಳ ಮೂಲದ ಶರಣ್ಯ ಅವರನ್ನು ಪತ್ತೆ ಮಾಡಿದ ಅಧಿಕಾರಿಗಳು ಹಾಗೂ ಬುಡಕಟ್ಟು ಜನರನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿನಂದಿಸಿದ್ದಾರೆ.

ಕೇರಳ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿರುವ ಡಿ.ಕೆ.ಶಿವಕುಮಾರ್ ಅವರನ್ನು ಶರಣ್ಯ ಅವರ ತಾಯಿ ಒರ್ಕಟ್ಟೇರಿಯ ಪ್ರಚಾರ ಸಭೆಯಲ್ಲಿ ಭೇಟಿ ಮಾಡಿ, ತಮ್ಮ ಪುತ್ರಿಯನ್ನು ಪತ್ತೆ ಮಾಡಲು ನೆರವಾಗುವಂತೆ ಕೋರಿದ್ದರು. ಡಿಸಿಎಂ ವೇದಿಕೆಯಿಂದಲೇ ರಾಜ್ಯದ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕಾರ್ಯಾಚರಣೆಯನ್ನು ತೀವ್ರಗೊಳಿಸುವಂತೆ ಸೂಚನೆ ನೀಡಿದ್ದರು.

''ಶರಣ್ಯ ಅವರನ್ನು ಭಾನುವಾರ ಸಂಜೆಯೇ ಪತ್ತೆ ಮಾಡಿ, ರಕ್ಷಣೆ ಮಾಡಲಾಗಿದೆ. ದೇವರ ನಾಡಿನ ಅಯ್ಯಪ್ಪಸ್ವಾಮಿ ಹಾಗೂ ತಾಯಿ ಚಾಮುಂಡೇಶ್ವರಿ ಕೃಪೆಯಿಂದ ನಮ್ಮ ಅರಣ್ಯ ಅಧಿಕಾರಿಗಳು, ಪೊಲೀಸರು ಹಾಗೂ ಬುಡಕಟ್ಟು ಜನರನ್ನು ಒಳಗೊಂಡ 170 ಜನರ ತಂಡವು ಪತ್ತೆ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿದೆ. ಶರಣ್ಯ ಅವರು ಪರಿಸ್ಥಿತಿಯನ್ನು ಧೈರ್ಯವಾಗಿ ನಿಭಾಯಿಸಿದ್ದಾರೆ. ಪತ್ತೆ ಮಾಡಲು ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು,'' ಎಂದು ಡಿಸಿಎಂ ಹೇಳಿದ್ದಾರೆ.

ಹಳೆಯ ವಿಡಿಯೊ ವೈರಲ್: ಆರೋಪ

ಹುಬ್ಬಳ್ಳಿ: ನಗರದ ಕೇಶ್ವಾಪುರ ಠಾಣೆಯಲ್ಲಿ ದಾಖಲಾದ ಲೈಂಗಿಕ ದೌರ್ಜನ್ಯ ಪ್ರಕರಣವು ಭಾನುವಾರ ಬಹಿರಂಗಗೊಂಡ ಯುವತಿಯ ಹೇಳಿಕೆಯ ವಿಡಿಯೊದಿಂದ ಹೊಸ ತಿರುವು ಪಡೆದಿದೆ.

''ಬಿಡುಗಡೆಗೊಂಡ ವಿಡಿಯೊಗಳು 6 ತಿಂಗಳ ಹಿಂದಿನದು, ಅದನ್ನು ಸ್ವಇಚ್ಛೆಯಿಂದ ಮಾಡಿಲ್ಲ,'' ಎಂದು ಯುವತಿ ಸ್ಪಷ್ಟನೆ ನೀಡಿದ್ದಾರೆ.

ಮಾಧ್ಯಮದವರ ಜತೆ ಮಾತನಾಡಿದ ಯುವತಿ, ''ನಾನು ಸ್ವಇಚ್ಛೆಯಿಂದಲೇ ಮುಫೀಜ್ ಜತೆಗೆ ಸಂಬಂಧ ಕಡಿದುಕೊಂಡಿದ್ದೇನೆ. ಹೀಗಾಗಿ ಅವನ ವಿರುದ್ಧ ದೂರು ದಾಖಲಿಸಿದ್ದೇನೆ. ಈ ಹಿಂದೆ ನನಗೆ ಬೆದರಿಕೆ ಹಾಕಿ ಆತ ಮಾಡಿರುವ ವಿಡಿಯೊಗಳು ಈಗ ವೈರಲ್ ಆಗುತ್ತಿವೆ. ಇದಕ್ಕೆ ಕಾಂಗ್ರೆಸ್ ಮುಖಂಡರೊಬ್ಬರು ಕಾರಣ,'' ಎಂದು ಆರೋಪಿಸಿದರು.

Published for the Proprietors, Metropolitan Media Company Limited, by Lokesh K V at No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph:08040877666) and printed by him at Bennett Coleman & Co Ltd., The Times of India Press, No.9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph:08042200500) Regd. Office: No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph:08040877666), Editor: Sudarshan Channangihalli – responsible for selection of news under PRB Act.